ಉಳ್ಳಾಲ ಪಟ್ಟಣ ಪಂಚಾಯತ್ ಪ್ರದೇಶದಲ್ಲಿ ಕುಡಿಯುವ ನೀರಿನ ಸೌಲಭ್ಯ

1099 (1637)

ಶ್ರೀ.ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

1. ಉಳ್ಳಾಲ ಪಟ್ಟಣ ಪಂಚಾಯತ್ ಪ್ರದೇಶದಲ್ಲಿ ಕುಡಿಯುವ ನೀರಿನ ಮತ್ತು ಒಳಚರಂಡಿಯ ವ್ಯವಸ್ಥೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಏಷ್ಯನ್ ಡೆವಲಪಮೆಂಟ್ ಬ್ಯಾಂಕಿನ ಮುಖಾಂತರ ಉಳ್ಳಾಲ ಟೌನ್ ಪಂಚಾಯಿತಿಗೆ ಏನು ಕಾರ್ಯಕ್ರಮ ಅಳವಡಿಸಲಾಗಿದೆ? ಎಷ್ಟು ಅನುದಾನ ನಿಗಧಿಪಡಿಸಲಾಗಿದೆ? ಎಷ್ಟು ಬಿಡುಗಡೆಯಾಗಿದೆ?

ಶ್ರೀ. ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು):

1. ಬಂದಿರುತ್ತದೆ.

2. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ನೆರವಿನಡಿ ಉಳ್ಳಾಲ ಟಾನ್ ಪಂಚಾಯತಿ ವ್ಯಾಪ್ತಿಗೆ 13.40ಎಂ.ಎಲ್.ಡಿ. ಕುಡಿಯುವ ನೀರನ್ನು ಬೃಹತ್ ಮಂಗಳೂರು ನೀರು ಸರಬರಾಜು ಯೋಜನೆಯ ಪ್ರಸ್ತಾವನೆಯೊಂದಿಗೆ ವಿಸ್ತರಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಯೋಜನೆಗೆ ಒಟ್ಟು ರೂ.10.525 ಕೋಟಿ ರೂ.ಗಳಾಗಬಹುದೆಂದು ಅಂದಾಜು ಮಾಡಲಾಗಿದೆ.

ಒಳಚರಂಡಿ ವ್ಯವಸ್ಥೆಗಾಗಿ ಅನ್‌ಸೈಟ್ ಸ್ಯಾನಿಟೇಶನ್ ಒದಗಿಸಲು ಯೋಜಿಸಲಾಗಿದೆ. ಈ ಯೋಜನೆಗೆ ರೂ. 0.44 ಕೋಟಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಎ.ಡಿ.ಜಿ.ಯಿಂದ ಅನುಮೋದನೆ ಆಗಿರದ ಕಾರಣ ಅನುದಾನ ನಿಗದಿ ಪಡಿಸಿರುವುದಿಲ್ಲ. ಆದುದರಿಂದ ಹಣ ಬಿಡುಗಡೆ ಪ್ರಶ್ನೆ ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಚ್ಚಿರುವ ಕೈಗಾರಿಕೆಗಳು.

1101 (1584)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್‌ಕಲ್) ಮಾನ್ಯ ಸಣ್ಣಕೈಗಾರಿಕೆ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1997ರಿಂದ ಇದುವರೆಗೆ ಕಾರ್ಯನಿರ್ವಹಿಸುತ್ತಿರುವ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಮುಚ್ಚಲ್ಪಟ್ಟ ಕೈಗಾರಿಕೆಗಳ ಸಂಖ್ಯೆ ಎಷ್ಟು? ಹಾಗೂ ಮುಚ್ಚಲಿಕ್ಕೆ ಕಾರಣಗಳೇನು?

ಇ) ಜಿಲ್ಲೆಯ ಸಣ್ಣ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ನೌಕರರ ಸಂಖ್ಯೆ ಎಷ್ಟು? ಅವರಲ್ಲಿ ಸ್ಥಳೀಯರ ಸಂಖ್ಯೆ ಎಷ್ಟು? (ಕೈಗಾರಿಕೆವಾರು ವಿವರ ಒದಗಿಸುವುದು)